ಮಕ್ಕಳ ತಜ್ಞರು, ಗೈನಕಾಲಜಿಸ್ಟ್ ಅಂತಹವರನ್ನು ಹಾಕಿದರೆ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಏನೂ ಪ್ರಯೋಜನ ಇಲ್ಲದೆ ಇರತಕ್ಕ ವೈದ್ಯರುಗಳನ್ನು ಹಾಕಿ ಆಸ್ಪತ್ರೆಯಲ್ಲಿ ಲೆಕ್ಕಕ್ಕೆ ಮಾತ್ರ ಇಡುವುದರ ಬದಲು ಸೇವೆಯನ್ನು ಕೊಡತಕ್ಕ ಕಾರ್ಯವನ್ನು ಮಾಡುತ್ತಾರೆಯೇ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಡಾ|| ಎ.ಬಿ. ಮಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಕೇವಲ ಪಾಂಡವಪುರ ಸಾರ್ವಜನಿಕ ಆಸ್ಪತ್ರೆ ಅಷ್ಟೇ ಅಲ್ಲ, ರಾಜ್ಯದ ಅನೇಕ ಆಸ್ಪತ್ರೆಗಳಲ್ಲಿ ಸಿಬ್ಬಂದಿಯ ಸ್ವಲ್ಪ ಕೊರತೆಯಿದೆ. ಅದಕ್ಕೆ ಕಾರಣ ಇಷ್ಟೆ, 1987ನೇ ಇಸವಿಯಿಂದ ಇಲ್ಲಿಯವರೆಗೆ ಹೊಸ ನೇಮಕಾತಿಗೆ ಬ್ಯಾನ್ ಇತ್ತು. ಸರ್ಕಾರ ನೇಮಕಾತಿಯನ್ನು ನಿಷೇಧಿಸಿತ್ತು. ನಮ್ಮ ಸರ್ಕಾರ ಬಂದಮೇಲೆ ಸುಮಾರು 1800 ಹೊಸ ಡಾಕ್ಟರುಗಳನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಅದು 1987ರಿಂದ ಈಚೆಗೆ. ಆಮೇಲೆ ಪ್ಯಾರಾಮೆಡಿಕಲ್ ಸಿಬ್ಬಂದಿಗೆ ಸ್ವಲ್ಪ ತೊಂದರೆಯಿದೆ. ಸದ್ಯ ಹಣಕಾಸು ಇಲಾಖೆಯಿಂದ ಕ್ಲಿಯರೆನ್ಸ್ ಬಂದಿದೆ. ಸುಮಾರು 5 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೇವೆ. ಆದರೆ ಹುದ್ದೆಗಳನ್ನು ಭರ್ತಿ ಮಾಡುವ ಹಂತದಲ್ಲಿ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ಬಂದಿದೆ. ಆದರೂ ಕೂಡ ಮಾನ್ಯ ಸದಸ್ಯರು ಹೇಳುವಂತೆ 66 ಹುದ್ದೆಗಳಲ್ಲಿ ಕೇವಲ 17 ಹುದ್ದೆಗಳು ಅಲ್ಲಿ ಖಾಲಿಯಿವೆ. ಅಲ್ಲಿ ಕೆಲಸ ನಡೆಯುತ್ತಿಲ್ಲ, ಗುಣಮಟ್ಟ ಸರಿಯಿಲ್ಲವೆಂದು ಹೇಳಿದರೆ ಅದನ್ನು ಒಪ್ಪಲಿಕ್ಕೆ ನಾನು ತಯಾರಾಗಿಲ್ಲ. ಸಾಮಾನ್ಯ ವೈದ್ಯರ ಒಂದೇ ಒಂದು ಹುದ್ದೆ ಖಾಲಿಯಿದೆ. ಶುಶ್ರೂಷಕರ ಎರಡು ಹುದ್ದೆಗಳು ಖಾಲಿ ಇವೆ. ಪ್ಯಾರಾಮೆಡಿಕಲ್ ಸಿಬ್ಬಂದಿ ವಿವಿಧ ಹಂತಗಳಲ್ಲಿ ಒಂದೊಂದು ಖಾಲಿ ಇವೆ. ಕೆಲಸ ಚೆನ್ನಾಗಿ ನಡೆದಿದೆ. ಆಸ್ಪತ್ರೆಗಳಲ್ಲಿ ಸಲಕರಣೆಗಳನ್ನು ಒದಗಿಸಬೇಕಾದದ್ದು ನಮ್ಮ ಕರ್ತವ್ಯವಲ್ಲ ಅದು ಜಿಲ್ಲಾ ಪಂಚಾಯಿತಿಗೆ ಬರುತ್ತದೆ. ಸದಸ್ಯರ ಜೊತೆಗೆ ಸರ್ಕಾರ ಕೂಡ ಮಾಹಿತಿಯನ್ನು ಕೊಟ್ಟು ಶೀಘ್ರವಾಗಿ ಸಲಕರಣೆಗಳನ್ನು ಒದಗಿಸಿ ಕೊಡಲು ಸರ್ಕಾರ ಅವರ ಜೊತೆಯಲ್ಲಿ ಪ್ರಯತ್ನ ಮಾಡುತ್ತದೆ.

ಮಂಡ್ಯ ತಾಲ್ಲೂಕಿನಲ್ಲಿರುವ ಸಹಾಯಕ ಶಿಕ್ಷಣಾಧಿಕಾರಿಯ ಏಂಗಡಣೆ

504 - ಶ್ರೀ ಎನ್. ತಮ್ಮಣ್ಣ (ಕೆರೆಗೋಡು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ತಾಲ್ಲೂಕಿನಲ್ಲಿರುವ ಸಹಾಯಕ ಶಿಕ್ಷಣಾಧಿಕಾರಿಗಳ ಹುದ್ದೆಯನ್ನು ವಿಂಗಡಣೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ಯಾವಾಗ ವಿಂಗಡಣೆ ಮಾಡುತ್ತೀರಿ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರದ ಮಟ್ಟದಲ್ಲಿ ಈ ಪ್ರಸ್ತಾವನೆಯನ್ನು ತಿರಸ್ಕರಿಸಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಎನ್. ತಮ್ಮಣ್ಣ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಮಟ್ಟದಲ್ಲಿ ಈ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆಯೆಂದು ಹೇಳಿದ್ದಾರೆ ಯಾವ ಕಾರಣದಿಂದ ತಿರಸ್ಕರಿಸಲಾಗಿದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಒಬ್ಬರು ಎಇಒ ಇರುವುದು ಇವತ್ತಿನ ಪದ್ಧತಿಯಲ್ಲಿರುವ ಒಂದು ವ್ಯವಸ್ಥೆ. ಅದಕ್ಕೆ ಇನ್ನು ಹೆಚ್ಚು ರೇಂಜಸ್ ಮಾಡಬೇಕಾದರೆ ಅದು ನೀಡ್ ಇದ್ದರೆ ಮಾತ್ರ

ಮಾಡುವುದಕ್ಕೆ ಸಾಧ್ಯವಿದೆ. ಸರ್ಕಾರದಲ್ಲಿ ಒಂದು ಹೊಸ ಪ್ರಪೋಸಲ್ಸ್ ಸಹ ಇದೆ. ಈಗ ಇರುವ ಎಇಒ ಪೋಸ್ಟನ್ನು ತಾಲ್ಲೂಕುಮಟ್ಟದಲ್ಲಿ ಅಪ್‌ಗ್ರೇಡ್ ಮಾಡಿ ಎಜುಕೇಷನ್ ಆಫೀಸರ್ ಎಂದು ಮಾಡಲಾಗುವುದು. ಆಗ ನಿಮ್ಮ ಸಮಸ್ಯೆ ಏನಿದೆ ಅದು ಬಗೆಹರಿಯುವುದಕ್ಕೆ ಸಾಧ್ಯವಾಗುತ್ತದೆ. ಎಜುಕೇಷನ್ ಆಫೀಸರ್ ಆದನಂತರ ಅವರ ಕೆಳಗೆ ಎಇಒ ಸಹ ಇರುತ್ತಾರೆ. ಈ ಹೊಸ ಪ್ರಪೋಸಲ್ ಮಂಜೂರಾದರೆ ಇದರಿಂದ ನಿಮ್ಮ ಸಮಸ್ಯೆ ಬಗೆಹರಿಯುತ್ತದೆಂದು ನನಗೆ ತೋರುತ್ತದೆ.

ಶ್ರೀ ಎನ್. ತಮ್ಮಣ್ಣ : ಮಾನ್ಯ ಅಧ್ಯಕ್ಷರೆ, ಮಂಡ್ಯ ತಾಲ್ಲೂಕು ಸುಮಾರು ಮೂರು ಜನ ವಿಧಾನಸಭಾ ಸದಸ್ಯರನ್ನು ಒಳಗೊಂಡಿರುತ್ತದೆ. 1971ರಲ್ಲಿ ಅಲ್ಲಿ ಎಇಒ ಆಫೀಸ್ ಶುರುವಾಗಿ ಅಲ್ಲಿ 6 ಜನ ಮಾತ್ರ ಸಿಬ್ಬಂದಿ ವರ್ಗವಿತ್ತು. ಸುಮಾರು 359 ಶಾಲೆಗಳಿವೆ, ಆ ಶಾಲೆಗಳನ್ನು ಇನ್ಸ್‌ಪೆಕ್ಷನ್ ಮಾಡಬೇಕಾದರೆ ಕನಿಷ್ಟ 6 ತಿಂಗಳಾಗುತ್ತದೆ. ಒಬ್ಬರು ಎಇಒಯಿಂದ ಇನ್ಸ್‌ಪೆಕ್ಷನ್ ಮಾಡುವುದಕ್ಕಾಗುವುದಿಲ್ಲ. ಆರುತಿಂಗಳು ರಜೆ ಆರುತಿಂಗಳು ಶಾಲೆ ಇರುತ್ತದೆ. ಹಾಗಾಗಿ ಮಂಡ್ಯ ಜಿಲ್ಲೆ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆ. ನಮ್ಮ ಜಿಲ್ಲೆ ಶೈಕ್ಷಣಿಕವಾಗಿ ಉತ್ತಮವಾಗಬೇಕಾದರೆ ನಾನು ಹೇಳಿದಹಾಗೆ ಮಾಡಬೇಕು. ಕಳೆದಬಾರಿ ಡಿಪಿಎಆರ್‌ನವರು ಮಂಡ್ಯ ತಾಲ್ಲೂಕಿಗೆ ಒಂದು ಪ್ರಪೋಸಲ್ಸ್ ಮಾಡಿದ್ದಾರೆ. ತಾವು ಏನೋ ಹೊಸದಾಗಿ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಯಾವಾಗ ಮಾಡುತ್ತೀರಿ? ಅದು ಆಗದಿದ್ದರೆ ಡಿ.ಪಿ.ಎ.ಆರ್‌ನವರು ಮಾಡಿರುವ ಪ್ರಪೋಸಲ್ಸ್‌ನ್ನು ಜಾರಿಗೆ ಕೊಡುತ್ತೀರಾ?

ಶ್ರೀ ಎಸ್.ಎಂ. ಯಾಹ್ಯಾ : ಯಾವ ಒಂದು ಹೊಸ ಪ್ರಪೋಸಲ್ ಇದೆ, ಅದು ಸರ್ಕಾರದ ಮುಂದೆ ಇರುವುದರಿಂದ, ಅದನ್ನು ಆದಷ್ಟು ಬೇಗ ಮಾಡುವ ರೀತಿಯಲ್ಲಿ ಆ ಪ್ರಪೋಸಲ್ ಅಕ್ಸೆಪ್ಟ್ ಆದರೆ ಆಗಬಹುದು. ಇಲ್ಲದಿದ್ದರೆ ಆ ರೀತಿ ಅವಶ್ಯಕತೆ ಇದ್ದರೆ ಪುನಃ ಸರ್ಕಾರ ಇದನ್ನು ಮರುಪರಿಶೀಲನೆ ಮಾಡುತ್ತದೆ.

ಖಾಸಗಿ ವೈದ್ಯಕೀಯ ಕಾಲೇಜುಗಳು

373 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಅಧಿಕೃತ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ಶಿಕ್ಷಣ ಸಂಸ್ಥೆಗಳವರು ಇವುಗಳನ್ನು ನಡೆಸುತ್ತಿದ್ದಾರೆ ಮತ್ತು ಯಾವ ವರ್ಷದಿಂದ ಸರ್ಕಾರ ಅವುಗಳಿಗೆ ಮನ್ನಣೆ ನೀಡಿರುವರು (ಪೂರ್ಣ ವಿವರಗಳನ್ನು ಒದಗಿಸುವುದು)

ಇ) ಈ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಹಾಗೂ ಇತರ ನಿರ್ವಹಣಾ ಕ್ರಮತೆಯು ಯಾವ ರೀತಿಯಲ್ಲಿದೆ?

ಈ) ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಕಲಿಯ ಬಯಸುವ ವಿದ್ಯಾರ್ಥಿಯೊಬ್ಬನಿಗೆ ಪದವಿ ಮುಗಿಸಲು ಆಗುವ ಅಧಿಕೃತ ವೆಚ್ಚು ಎಷ್ಟು? ಅಧಿಕೃತವಾಗಿ ಶಿಕ್ಷಣ ಸಂಸ್ಥೆಗೆ ವಿದ್ಯಾರ್ಥಿಯಿಂದ ಸಂದಾಯವಾಗುವ ಮೊತ್ತ ಎಷ್ಟು?

ಉ) ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ ಶಿಕ್ಷಣ ಬಯಸುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗಧಿಪಡಿಸಿರುವ ಶುಲ್ಕ ಇತ್ಯಾದಿಗಳು ಎಷ್ಟು?

ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) :